**All India Radio: Bangalore**
**National Bulletin In Kannada**
**20.08.2026  07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**20.08.2026  07.35 a.m.**
**<><><><>**

ಮುಖ್ಯಾಂಶಗಳು

1. ಜಪಾನ್ ರಕ್ಷಣಾ ಸಚಿವರೊಂದಿಗೆ ಇಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ದ್ವಿಪಕ್ಷೀಯ ಮಾತುಕತೆ
2. ಇಂದು ಭಾರತ-ಸಿಂಗಾಪುರ ಸಚಿವರ ಮಟ್ಟದ ದುಂಡುಮೇಜಿನ ೩ನೇ ಸುತ್ತಿನ ಸಭೆ
3. ಮಾಸ್ಕೋದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಇಂಡಿಯಾ ಡೇ ಉತ್ಸವ  ಆರಂಭ
4. ಎಫ್‌ಐಎಚ್ ಹಾಕಿ ವಿಶ್ವಕಪ್: ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಮಣಿಸಿ ರೋಚಕ ಗೆಲುವು ಸಾಧಿಸಿದ ಭಾರತ

<><><><>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಇಂದು ನವದೆಹಲಿಯಲ್ಲಿ ಜಪಾನ್ ರಕ್ಷಣಾ ಸಚಿವ ಶಿಂಜಿರೊ ಕೊಯಿಜುಮಿ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಸಭೆಯಲ್ಲಿ ದ್ವಿಪಕ್ಷೀಯ ರಕ್ಷಣಾ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಗಮನ ಹರಿಸುವ ನಿರೀಕ್ಷೆಯಿದ್ದು, ಕಾರ್ಯತಂತ್ರದ ವಿಶ್ವಾಸ ಮತ್ತು ಸಹಕಾರವನ್ನು ಹೆಚ್ಚಿಸಲು ಆದ್ಯತೆ ನೀಡಲಾಗುತ್ತದೆ. ಮುಖ್ಯವಾಗಿ ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಸ್ಥಿರತೆ ಮತ್ತು ಭದ್ರತೆಗೆ ಮಹತ್ವವನ್ನು ನೀಡಲಾಗುತ್ತದೆ. ಮೇಕ್-ಇನ್-ಇಂಡಿಯಾ ಚೌಕಟ್ಟಿನಡಿಯಲ್ಲಿ ಆಳವಾದ ಕಡಲ ಭದ್ರತಾ ಸಹಕಾರ ಮತ್ತು ನಿಕಟ ರಕ್ಷಣಾ ಸಾಧನಗಳು ಹಾಗೂ ತಂತ್ರಜ್ಞಾನದ ಸಹಯೋಗದ ಕುರಿತು ಉಭಯ ಸಚಿವರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ. ದ್ವಿಪಕ್ಷೀಯ ರಕ್ಷಣೆ ಮತ್ತು ಭದ್ರತಾ ಸಹಕಾರವನ್ನು ಮತ್ತಷ್ಟು ಮುಂದುವರಿಸಲು ಮಾರ್ಗಸೂಚಿಯನ್ನು ನಿರ್ಮಿಸಲು ಸಭೆಯು ಅವಕಾಶವನ್ನು ಒದಗಿಸುತ್ತದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಜಪಾನ್ ರಕ್ಷಣಾ ಸಚಿವ ಶಿಂಜಿರೋ ಕೊಯಿಜುಮಿ ಇದೇ ಮೊದಲ ಬಾರಿಗೆ ಭಾರತಕ್ಕೆ ಭೇಟಿ ನೀಡುತ್ತಿದ್ದು, ಅವರು ನಿನ್ನೆ ಮುಂಬೈನ ಪಶ್ಚಿಮ ನೌಕಾ ಕಮಾಂಡ್‌ಗೆ ಭೇಟಿ ನೀಡಿದ್ದರು.  ಅಲ್ಲಿ ಅವರು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಮತ್ತು ಫ್ಲಾಗ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್, ವೆಸ್ಟರ್ನ್ ನೇವಲ್ ಕಮಾಂಡ್ ವೈಸ್ ಅಡ್ಮಿರಲ್ ಸಂಜಯ್ ವತ್ಸಯನ್ ಅವರೊಂದಿಗೆ ಚರ್ಚೆ ನಡೆಸಿದರು. ಭಾರತೀಯ ನೌಕಾಪಡೆಯ ಪಾತ್ರಗಳು ಮತ್ತು ಜವಾಬ್ದಾರಿಗಳು ಹಾಗೂ ಕಾರ್ಯಾಚರಣೆಯ ಸಾಮರ್ಥ್ಯಗಳ ಬಗ್ಗೆ ನಿಯೋಗಕ್ಕೆ ವಿವರಿಸಲಾಯಿತು. ಭಾರತ ಮತ್ತು ಜಪಾನ್ ಮುಕ್ತ ಹಾಗೂ ಸಮೃದ್ಧ ಇಂಡೋ-ಪೆಸಿಫಿಕ್ ಪ್ರದೇಶವನ್ನು ನಿರ್ಮಿಸುವ ಸಾಮಾನ್ಯ ದೃಷ್ಟಿಕೋನವನ್ನು ಹಂಚಿಕೊಳ್ಳುತ್ತವೆ. ಜಪಾನ್ ರಕ್ಷಣಾ ಸಚಿವರ ಎರಡು ದಿನಗಳ ಭೇಟಿಯು ದ್ವಿಪಕ್ಷೀಯ ರಕ್ಷಣಾ ಸಹಕಾರದಲ್ಲಿ ಬೆಳೆಯುತ್ತಿರುವ ವೇಗವನ್ನು ಮತ್ತು ಪಾಲುದಾರಿಕೆಯನ್ನು ಮತ್ತಷ್ಟು ವಿಸ್ತರಿಸುವ ಬಗ್ಗೆ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

<><><><>

ಭಾರತ-ಸಿಂಗಾಪುರ ಸಚಿವರ ದುಂಡುಮೇಜಿನ ೩ನೇ ಸುತ್ತಿನ ಸಭೆ ಇಂದು ಸಿಂಗಾಪುರದಲ್ಲಿ ನಡೆಯಲಿದೆ. ಭಾರತದಿಂದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್,

ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹಾಗೂ ವಾಣಿಜ್ಯ, ಕೈಗಾರಿಕೆ, ಎಲೆಕ್ಟ್ರಾನಿಕ್ಸ್ ಹಾಗೂ ಐಟಿ ರಾಜ್ಯ ಸಚಿವ ಜಿತಿನ್ ಪ್ರಸಾದ್ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಹೊಸ ಮತ್ತು ಉದಯೋನ್ಮುಖ ಕ್ಷೇತ್ರಗಳನ್ನು ಒಳಗೊಂಡಂತೆ ಸಹಕಾರವನ್ನು ಹೆಚ್ಚಿಸಲು ಸಭೆಯ ಕಾರ್ಯವಿಧಾನವು ಒಂದು ಪ್ರಮುಖ ವೇದಿಕೆಯಾಗಿದೆ. ಇದರ ಉದ್ಘಾಟನಾ ಸಭೆಯು ಸೆಪ್ಟೆಂಬರ್ ೨೦೨೨ರಲ್ಲಿ ನವದೆಹಲಿಯಲ್ಲಿ ನಡೆಯಿತು, ನಂತರ ಆಗಸ್ಟ್ ೨೦೨೪ ರಲ್ಲಿ ಸಿಂಗಾಪುರದಲ್ಲಿ ೨ನೇ ಸಭೆ ಮತ್ತು ಆಗಸ್ಟ್ ೨೦೨೫ರಲ್ಲಿ ನವದೆಹಲಿಯಲ್ಲಿ ೩ನೇ ಸಭೆ ನಡೆಯಿತು. ಈ ಸಭೆಗಳಿಂದ ಸುಧಾರಿತ ಉತ್ಪಾದನೆ, ಸಂಪರ್ಕ, ಡಿಜಿಟಲೀಕರಣ, ಆರೋಗ್ಯ ರಕ್ಷಣೆ ಮತ್ತು ಔಷಧ, ಕೌಶಲ್ಯಾಭಿವೃದ್ಧಿ ಮತ್ತು ಸುಸ್ಥಿರತೆಯ ಕುರಿತು ಚರ್ಚೆಗಳು ನಡೆದವು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಸಿಂಗಾಪುರದ ಪ್ರಧಾನಿ ಲಾರೆನ್ಸ್ ವಾಂಗ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಭಾರತ-ಸಿಂಗಾಪುರ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ ಮಾರ್ಗಸೂಚಿ ಅನಾವರಣಗೊಂಡಿತು. ೪ನೇ ಸುತ್ತಿನ ಸಭೆಯಲ್ಲಿ ಎರಡೂ ಕಡೆಯವರಿಗೆ ವಿವಿಧ ಉಪಕ್ರಮಗಳ ಪ್ರಗತಿಯನ್ನು ಪರಿಶೀಲಿಸಲು ಮತ್ತು ಭಾರತ-ಸಿಂಗಾಪುರ ಸಹಯೋಗವನ್ನು ಮತ್ತಷ್ಟು ಬಲಪಡಿಸುವ ಮಾರ್ಗಗಳನ್ನು ಗುರುತಿಸಲು ಅನುವು ಮಾಡಿಕೊಡುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

<><><><>

ಮಾಸ್ಕೋದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಇಂಡಿಯಾ ಡೇ ಉತ್ಸವ ಪ್ರಾರಂಭವಾಗಲಿದ್ದು, ಇದು ಸಂಸ್ಕೃತಿ, ಸಂಪ್ರದಾಯಗಳು ಮತ್ತು ಜನರ ನಡುವಿನ ಸಂಬಂಧಗಳ ಆಚರಣೆಗಾಗಿ ಭಾರತೀಯ ಮತ್ತು ರಷ್ಯಾದ ಸಮುದಾಯಗಳನ್ನು ಒಟ್ಟುಗೂಡಿಸುತ್ತದೆ. ಈ ಉತ್ಸವವು ಮಾಸ್ಕೋದ ಗೋಸ್ಟಿನಿ ಡ್ವೋರ್‌ನಲ್ಲಿ ನಡೆಯಲಿದೆ. "ಸಂಸ್ಕೃತಿಗಳ ಏಕತೆ - ಜನರ ಸ್ನೇಹ" ಎಂಬ ವಿಷಯದ ಅಡಿಯಲ್ಲಿ ಆಯೋಜಿಸಲಾಗಿರುವ ಈ ಉತ್ಸವವು ಹಲವಾರು ಸ್ಥಳಗಳಲ್ಲಿ ಹರಡಿರುವ ವೈವಿಧ್ಯಮಯ ಕಾರ್ಯಕ್ರಮವನ್ನು ಒಳಗೊಂಡಿರುತ್ತದೆ. ಸುಮಾರು ೧೦ ವಿಶೇಷ ವಲಯಗಳು ಸಂದರ್ಶಕರಿಗೆ ಯೋಗ, ಚದುರಂಗ, ಭಾರತೀಯ ವಿವಾಹಗಳು, ನೃತ್ಯ ಮತ್ತು ಆಯುರ್ವೇದ ಸೇರಿದಂತೆ ಭಾರತೀಯ ಸಂಸ್ಕೃತಿಯ ವಿವಿಧ ಅಂಶಗಳನ್ನು ಅನ್ವೇಷಿಸಲು ಅವಕಾಶವನ್ನು ನೀಡುತ್ತವೆ. ಉತ್ಸವವು ರಷ್ಯಾದಾದ್ಯಂತ ಸುಮಾರು ೭೫ ಯೋಗ ಶಾಲೆಗಳನ್ನು ಮತ್ತು ಇತರ ದೇಶಗಳ ಬೋಧಕರನ್ನು ಒಳಗೊಂಡಂತೆ ನಡೆಯಲಿದೆ. ೨೦೦ಕ್ಕೂ ಹೆಚ್ಚು ಭಾರತೀಯ ಮತ್ತು ರಷ್ಯಾದ ನೃತ್ಯಗಾರರು ಭಾರತೀಯ ನೃತ್ಯದ ವೈವಿಧ್ಯತೆ ಮತ್ತು ಕಲಾತ್ಮಕ ಸಂಪ್ರದಾಯಗಳನ್ನು ಪ್ರದರ್ಶಿಸುವ ಪ್ರದರ್ಶನಗಳಲ್ಲಿ ಭಾಗವಹಿಸಲಿದ್ದಾರೆ.

<><><><>

ಯುವ ಸಂಗಮ ೬ನೇ ಹಂತಕ್ಕೆ ಆನ್‌ಲೈನ್ ನೋಂದಣಿಗೆ ಕೊನೆಯ ದಿನಾಂಕವನ್ನು ಈ ತಿಂಗಳ ೩೧ ರವರೆಗೆ ವಿಸ್ತರಿಸಲಾಗಿದೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ. ಈ ವಿಸ್ತರಣೆಯು ದೇಶಾದ್ಯಂತದ ಅರ್ಹ ಯುವಕರಿಗೆ ಈ ವಿಶಿಷ್ಟ ಯುವ ವಿನಿಮಯ ಕಾರ್ಯಕ್ರಮದಲ್ಲಿ ನೋಂದಾಯಿಸಲು ಮತ್ತು ಭಾಗವಹಿಸಲು ಹೆಚ್ಚುವರಿ ಅವಕಾಶವನ್ನು ಒದಗಿಸುತ್ತದೆ. ಈ ಹಿಂದೆ ಯುವ ಸಂಗಮ ೬ನೇ ಹಂತಕ್ಕೆ ನೋಂದಾಯಿಸಲು ಆಗಸ್ಟ್ ೧೮ ಕೊನೆಯ ದಿನಾಂಕವಾಗಿತ್ತು. ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ಸ್ವಯಂಸೇವಕರು ಮತ್ತು ಯುವ ವೃತ್ತಿಪರರು ಸೇರಿದಂತೆ ೧೮ ರಿಂದ ೩೦ ವರ್ಷ ವಯಸ್ಸಿನ ಆಸಕ್ತ ಯುವಕರು ಅಧಿಕೃತ ಯುವ ಸಂಗಮ

ಪೋರ್ಟಲ್ ಮೂಲಕ ನೋಂದಾಯಿಸಿಕೊಳ್ಳಬಹುದು. ಯುವ ಸಂಗಮ ೭ನೇ ಹಂತಕ್ಕಾಗಿ, ಐಐಟಿಗಳು, ಐಐಎಂಗಳು, ಕೇಂದ್ರ ವಿಶ್ವವಿದ್ಯಾಲಯಗಳು ಮತ್ತು ಎನ್‌ಐಟಿಗಳು ಸೇರಿದಂತೆ ೨೦ ಉನ್ನತ ಶಿಕ್ಷಣ ಸಂಸ್ಥೆಗಳನ್ನು ವಿನಿಮಯ ಕಾರ್ಯಕ್ರಮವನ್ನು ಆಯೋಜಿಸಲು ನೋಡಲ್ ಸಂಸ್ಥೆಗಳಾಗಿ ಗುರುತಿಸಲಾಗಿದೆ. ಆಯ್ಕೆಯಾದವರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಐದು ರಿಂದ ಏಳು ದಿನಗಳ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರವಾಸಗಳನ್ನು ಕೈಗೊಳ್ಳುತ್ತಾರೆ. ವಿನಿಮಯ ಕಾರ್ಯಕ್ರಮದ ಸಮಯದಲ್ಲಿ ಅವರು ಸ್ಥಳೀಯ ಸಂಪ್ರದಾಯಗಳು, ಶೈಕ್ಷಣಿಕ ಸಂಸ್ಥೆಗಳು, ಆಡಳಿತ ಉಪಕ್ರಮಗಳು, ನಾವೀನ್ಯತೆ ಪರಿಸರ ವ್ಯವಸ್ಥೆಗಳು, ಕೈಗಾರಿಕೆಗಳು, ಪರಂಪರೆಯ ತಾಣಗಳು ಮತ್ತು ಸಮುದಾಯ ಜೀವನಕ್ಕೆ ನೇರವಾಗಿ ಒಡ್ಡಿಕೊಳ್ಳುತ್ತಾರೆ.

<><><><>

ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಅರ್ಮೇನಿಯಾಗೆ ತಮ್ಮ ಎರಡು ದಿನಗಳ ಪ್ರವಾಸವನ್ನು ಮುಗಿಸಿದ್ದಾರೆ. ಈ ಭೇಟಿಯ ಸಮಯದಲ್ಲಿ, ಅವರು ಅರ್ಮೇನಿಯಾದ ಉಪ ರಕ್ಷಣಾ ಸಚಿವೆ ಕರೆನ್ ಬ್ರೂಟ್ಯಾನ್ ಮತ್ತು ಅರ್ಮೇನಿಯಾದ ಮೊದಲ ಉಪ ರಕ್ಷಣಾ ಸಚಿವೆ ಮತ್ತು ಜನರಲ್ ಸ್ಟಾಫ್ ಮುಖ್ಯಸ್ಥ ಎಡ್ವರ್ಡ್ ಅಸ್ರ್ಯಾನ್ ಅವರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಿದರು. ಸಾಮರ್ಥ್ಯ ವೃದ್ಧಿ, ತರಬೇತಿ, ಮಿಲಿಟರಿ ತಾಂತ್ರಿಕ ಸಹಕಾರ ಮತ್ತು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿಯ ಮೇಲೆ ನಿರ್ದಿಷ್ಟವಾಗಿ ಒತ್ತು ನೀಡಿ, ನಡೆಯುತ್ತಿರುವ ರಕ್ಷಣಾ ಮತ್ತು ಮಿಲಿಟರಿ ತಾಂತ್ರಿಕ ಸಹಕಾರದ ಸಂಪೂರ್ಣ ವ್ಯಾಪ್ತಿಯನ್ನು ಚರ್ಚೆಗಳು ಒಳಗೊಂಡಿವೆ. ಭಾರತೀಯ ಮತ್ತು ಅರ್ಮೇನಿಯನ್ ಸಶಸ್ತ್ರ ಪಡೆಗಳ ನಡುವಿನ ಜಂಟಿ ಸೇವೆಗಳ ಸಿಬ್ಬಂದಿ ಮಾತುಕತೆಗಳನ್ನು ಸಾಂಸ್ಥಿಕಗೊಳಿಸಲು ಎರಡೂ ಕಡೆಯವರು ಉಲ್ಲೇಖ ನಿಯಮಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಭೇಟಿಯ ಸಮಯದಲ್ಲಿ, ರಕ್ಷಣಾ ಕಾರ್ಯದರ್ಶಿ ಅರ್ಮೇನಿಯಾದ ಹೈಟೆಕ್ ಕೈಗಾರಿಕಾ ಸಚಿವ ಡೇವಿಟ್ ಟ್ರೇಡ್ಯೋಸ್ಯಾನ್ ಅವರನ್ನು ಭೇಟಿ ಮಾಡಿದರು ಮತ್ತು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಪ್ರಸ್ತಾಪಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು.

<><><><>

ಬಾಂಗ್ಲಾದೇಶದ ನೂತನ ಅಧ್ಯಕ್ಷರ ಆಯ್ಕೆಗಾಗಿ ಇಂದು ಚುನಾವಣೆ ನಡೆಯುತ್ತಿದೆ. ಆಡಳಿತಾರೂಢ ಬಿಎನ್‌ಪಿ ಪಕ್ಷದ ಹಿರಿಯ ನಾಯಕ ಮಿರ್ಜಾ ಫಕ್ರುಲ್ ಇಸ್ಲಾಂ ಆಲಮ್‌ಗಿರ್ ಮತ್ತು ೧೧ ಪಕ್ಷಗಳ ವಿರೋಧ ಪಕ್ಷಗಳ ಮೈತ್ರಿಕೂಟದ ಅಭ್ಯರ್ಥಿ ಕರ್ನಲ್ ಒಲಿ ಅಹ್ಮದ್ ಅವರ ನಡುವೆ ಈ ಸ್ಪರ್ಧೆ ಏರ್ಪಟ್ಟಿದೆ. ಚುನಾವಣಾ ಆಯೋಗವು ಆಗಸ್ಟ್ ೧೯ರಂದು ಅವರ ನಾಮಪತ್ರಗಳನ್ನು ಮಾನ್ಯವೆಂದು ಘೋಷಿಸಿತು. ಬಿಎನ್‌ಪಿ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಆಲಮ್‌ಗಿರ್, ಇಂದಿನ ಅಧ್ಯಕ್ಷೀಯ ಚುನಾವಣೆಯಲ್ಲಿ ತಮಗೆ ಮತ ಚಲಾಯಿಸುವಂತೆ ಬಿಎನ್‌ಪಿ ಶಾಸಕರಿಗೆ ಮನವಿ ಮಾಡಿದರು. ಚುನಾಯಿತ ಅಧ್ಯಕ್ಷರು ನಾಳೆ ಸಂಜೆ ಬಂಗಭಬನ್‌ನ ದರ್ಬಾರ್ ಹಾಲ್‌ನಲ್ಲಿ ಬಾಂಗ್ಲಾದೇಶದ ಹೊಸ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

<><><><>

ನೆದರ್ಲ್ಯಾಂಡ್ಸ್‌ನ ಆಮ್‌ಸ್ಟೆಲ್ವೀನ್‌ನಲ್ಲಿ ನಡೆದ ಎಫ್‌ಐಎಚ್ ಹಾಕಿ ವಿಶ್ವಕಪ್‌ನಲ್ಲಿ ಭಾರತ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ೫-೩ ಅಂತರದ ಜಯ ಸಾಧಿಸಿ ಮುಂದಿನ ಸುತ್ತಿಗೆ ಅರ್ಹತೆ ಗಳಿಸಿದೆ. ಹರ್ಮನ್ ಪ್ರೀತ್ ಸಿಂಗ್ ಮತ್ತು ಹಾರ್ದಿಕ್ ಸಿಂಗ್ ತಲಾ ಎರಡು ಗೋಲು ಗಳಿಸಿದರೆ, ಅಭಿಷೇಕ್ ಒಂದು ಗೋಲು ಗಳಿಸಿದರು.

ಭಾರತದ ಈ ಗೆಲುವಿನೊಂದಿಗೆ ಗುಂಪು ಹಂತದಲ್ಲಿ ಪಾಕಿಸ್ತಾನದ ಅಭಿಯಾನ ಕೊನೆಗೊಂಡಿತು. ಭಾರತದ ಪುರುಷರ ತಂಡವು ಈ ಹಿಂದೆ ವೇಲ್ಸ್ ತಂಡವನ್ನು ೩-೧ ಅಂತರದಿಂದ ಸೋಲಿಸಿತ್ತು, ಆದರೆ ಇಂಗ್ಲೆಂಡ್ ವಿರುದ್ಧ ೪-೨ ಅಂತರದಿಂದ ಸೋತಿತ್ತು. ಈ ಸೋಲಿನಿಂದಾಗಿ ಗುಂಪು ಹಂತದಲ್ಲಿ ಪಾಕಿಸ್ತಾನದ ಅಭಿಯಾನ ಕೊನೆಗೊಂಡಿದೆ. ಈ ರೋಚಕ ಗೆಲುವಿನೊಂದಿಗೆ ಭಾರತದ ಪುರುಷರ ತಂಡವು ಎರಡನೇ ಕ್ವಾರ್ಟರ್‌ಗೆ ಪ್ರವೇಶ ಪಡೆಯಿತು. ಪಂದ್ಯದಲ್ಲಿ ಒಂಬತ್ತು ನಿಮಿಷಗಳ ಒಳಗೆ ಎರಡೂ ತಂಡಗಳು ನಾಲ್ಕು ಗೋಲುಗಳನ್ನು ಗಳಿಸಿದವು. ಭಾರತವು ಈ ಹಿಂದೆ ವೇಲ್ಸ್ ವಿರುದ್ಧ ೩-೧ ಗೆಲುವಿನೊಂದಿಗೆ ತನ್ನ ಅಭಿಯಾನವನ್ನು ಆರಂಭಿಸಿತ್ತು. ಮತ್ತೊಂದೆಡೆ ಇಂಗ್ಲೆಂಡ್ ವಿರುದ್ಧ ೪-೨ ಅಂತರದ ಸೋಲನ್ನು ಅನುಭವಿಸಿತ್ತು. ಭಾರತ ಮತ್ತು ಇಂಗ್ಲೆಂಡ್ ತಂಡಗಳು ಡಿ ಗುಂಪಿನಿಂದ ಮುಂದಿನ ಸುತ್ತಿಗೆ ಮುನ್ನಡೆ ಸಾಧಿಸಿದ್ದರೆ, ಪಾಕಿಸ್ತಾನದ ಅಭಿಯಾನ ಕೊನೆಗೊಂಡಿದೆ. ಭಾರತೀಯ ಮಹಿಳಾ ತಂಡವು ಇಂದು ಆಮ್ಸ್ಟೆಲ್ವೀನ್‌ನ ವ್ಯಾಗೆನರ್ ಕ್ರೀಡಾಂಗಣದಲ್ಲಿ ಎಫ್ ಐ ಎಚ್ ಹಾಕಿ ವಿಶ್ವಕಪ್‌ನ ಕೊನೆಯ ಪೂಲ್ ಡಿ ಪಂದ್ಯದಲ್ಲಿ ಇಂಗ್ಲೆಂಡ್ ಅನ್ನು ಎದುರಿಸಲಿದೆ. ಈ ಪಂದ್ಯವು ಭಾರತೀಯ ಕಾಲಮಾನದ ಪ್ರಕಾರ ಸಂಜೆ ೬:೩೦ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>